


ದೌರ್ಭಾಗ್ಯವಂತ ಎಂದೂ ಅವನಿಗೆ ಅನಿಸಿರಬಹುದು. ಈ ಘಟನೆ ಕಟ್ಟುಕತೆಯೊ ಕಲ್ಪನೆಯೋ ಅಥವಾ ಚಕ್ರವರ್ತಿಯ ಸ್ವಗತವೋ ಅಲ್ಲದಿದ್ದರೆ ಮತ್ತೆ ಮತ್ತೆ ಕಾಣಿಸಿಕೊಳ್ಳುವ ಯುದ್ಧ, ಸಾಮ್ರಾಜ್ಯ ವಿಸ್ತರಣೆಗಳನ್ನು ಮಾತ್ರವಲ್ಲದೆ ಎಲ್ಲ ಬಗೆಯ ಸಣ್ಣ ದೊಡ್ಡ, ಸೌಮ್ಯ ತೀವ್ರ ಮಹತ್ವಾಕಾಂಕ್ಷೆಗಳನ್ನು ಅಣಕಿಸುವ, ವಿಮರ್ಶೆ ಮಾಡುವ ಒಂದು ಸಾತ್ವಿಕ ತಾತ್ವಿಕ ಪ್ರಜ್ಞೆಯೂ ಇರಬಹುದು. ನಿದ್ದೆಯೊಳಗಿನ ಎಚ್ಚರ ಯಾವಾಗ ಸಮಾಜಕ್ಕೆ ಸಮುದಾಯಕ್ಕೆ ಬೆಳಕು ನೀಡುವ ಕನಸಾಗಿ ಚಿಗುರುತ್ತದೆ, ಇನ್ನಾವಾಗ ಅಳತೆ ಆಕಾರವನ್ನು ಮೀರಿ ಬೆಳೆದು ಸಾರ್ವತ್ರಿಕ ನಾಶವನ್ನು ತರುತ್ತದೆ ಎಂದು ಯಾರೊಳಗೂ ಹುಟ್ಟಬಹುದಾದ ಒಂದು ಜಿಜ್ಞಾಸೆಯೂ ಆಗಿರಬಹುದು.

ನಿದ್ದೆ, ಎಚ್ಚರಗಳು ಅವು ಪ್ರನಿಧಿಸುವ ಶಬ್ದಗಳನ್ನು ಮೀರಿದ ತರ್ಕವಾಗಿ ಪ್ರತ್ಯಕ್ಷ, ಪರೋಕ್ಷವಾಗಿ ಎಲ್ಲರನ್ನೂ ಕಾಡುತ್ತಲೇ ಇರುತ್ತವೆ. ಅವೆರಡೂ ಒಂದಕ್ಕೊಂದು ವಿರೋಧ ಸ್ಥಿತಿಗಳಾಗಿ, ಕತ್ತಲೆ ಬೆಳಕುಗಳಂತೆ ಒಂದು ಇದ್ದಲ್ಲಿ ಇನ್ನೊಂದು ಇರಲಾರದು ಎಂದೆನಿಸಿದರೂ ಅವುಗಳ ಒಳಗೂ ಒಂದು ಹೊಂದಾಣಿಕೆ ಇದೆ. ಒಂದರೊಳಗೆ ಇನ್ನೊಂದು ಹೊಕ್ಕುವುದು ಸಾಧ್ಯ ಇದೆ. ಹಾಗೆ ಸಾಧ್ಯವಾದಾಗ, ಅಲ್ಲೊಂದು ಹೊಸ ಸ್ಥಿತಿ ಹುಟ್ಟಿ ನಿದ್ರೆಯೊಳಗಿನ ಎಚ್ಚರ ಆಗುತ್ತದೆ. ನಿದ್ದೆಯ ಎಚ್ಚರವೇ ಸ್ಫೂರ್ತಿಸೆಲೆಯಾಗಿ ಜಿನುಗುತ್ತದೆ. ಸಾರ್ಥಕ್ಯ, ಯಶಸ್ಸು, ನೆಮ್ಮದಿಗಳನ್ನು ಹುಡುಕುತ್ತ ಶತಪಥ ಅಲೆಯುತ್ತದೆ. ಪ್ರಶಾಂತ ನದಿಯೊಳಗೆ ಹುದುಗಿದ ವೇಗದ ಒಳಹರಿವಾಗುತ್ತದೆ. ನಿದ್ದೆ ಬಿಡುತ್ತದೆ, ಕನಸು ಕಾಣುತ್ತದೆ. ಆಮೇಲೆ, ಅಲೆಕ್ಸಾಂಡರನ ಕಾಲದಲ್ಲಿ ಮಾತ್ರವಲ್ಲ ಎಲ್ಲ ಕಾಲದಲ್ಲೂ ಪ್ರವಹಿಸುವ ನಿರಂತರ ತಾತ್ವಿಕ ಹರಿವಿಗೆ ಧುಮುಕುತ್ತದೆ. ಅರ್ಥ ಅನರ್ಥಗಳ ಜಿಜ್ಞಾಸೆಯ ಸುಳಿಯಲ್ಲಿ ಗರಗರ ಸುತ್ತುತ್ತದೆ. ಒಮ್ಮೆ ತೇಲುತ್ತದೆ ಇನ್ನೊಮ್ಮೆ ಕೊಚ್ಚೊಯಲ್ಪಡುತ್ತದೆ. ಒಂದು ದಡದಿಂದ ಇನ್ನೊಂದಕ್ಕೆ ಬಡಿಯುತ್ತದೆ. ರಾತ್ರಿ ಪಾಳಿಯ ಅಂಬಿಗನೊಬ್ಬನ ಸಂಗ ದೊರೆತರೆ ದೋಣಿ ಹತ್ತಿ ಕ್ಷೇಮದಲ್ಲಿ ಒಂದು ನೆಲೆಯಿಂದ ಮತ್ತೊಂದನ್ನೂ ತಲುಪುತ್ತದೆ. ಅಲ್ಲಿಗೇ ಸುಮ್ಮನಿರಲಾರದೆ ಮಗದೊಂದು ನೆಲೆಯನ್ನು ಚಡಪಡಿಕೆಯಲ್ಲಿ ಹುಡುಕಲಾರಂಭಿಸುತ್ತದೆ.

●